ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ, ನ್ಯಾಯಾಲಯ, ಕುಣಿಗಲ್.

ಸಿ.ಸಿ.ನಂ.4762/2023

ಪಿ.ಡಬ್ಲ್ಯೂ -04
ಸಿ.ಡಬ್ಲ್ಯೂ-05

ಸಾಕ್ಷಿದಾರನ ಹೆಸರುಃ- ಹೆಚ್.ಎಸ್. ಮಲ್ಲಿಕಾರ್ಜುನ
ತಂದೆ ಹೆಸರುಃ- ಯು. ಬಿ. ಕೊಟ್ಟುರಪ್ಪ
ವಯಸ್ಸುಃ- 61ವರ್ಷ
ಉದ್ಯೋಗಃ- ನಿವೃತ್ತ ಅಭಕಾರಿ ಉಪನಿರೀಕ್ಷಕರು
ವಾಸಃ- ತುಮಕೂರು

**ಸಾಕ್ಷಿಗೆ ದಿಃ21.07.2026 ರಂದು ಪ್ರಮಾಣ ವಚನ ಬೋದಿಸಲಾಯಿತು.**
**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದ.**

ನಾನು 02.11.2020 ರಿಂದ 21.01.2021 ರವರೆಗೆ ಕುಣಿಗಲ್ ವಲಯದಲ್ಲಿ ಅಭಕಾರಿ ಉಪನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 03.08.2021 ರಂದು ಚಾ.ಸಾ. 4 ಅವರಿಂದ ಪ್ರಕರಣಕ್ಕೆ ಸಂಬಂಧಿಸಿದ ದಾಖಲೆಗಳನ್ನು ಜಪ್ತು ಮಾಡಿದ ಮು. ಮಾ. ಗಳನ್ನು ಮತ್ತು ಸ್ವತ್ತು ಪಟ್ಟಿಯನ್ನು ಪಡೆದಿರುತ್ತೇನೆ. ಅದೇ ದಿನ RTOದೇವನಹಳ್ಳಿ ರವರಿಗೆ ವಾಹನದ ಬಿ ಎಕ್ಸ್‌ಟ್ರಕ್ ನೀಡುವಂತೆ ಪತ್ರ ವ್ಯವಹಾರ ಮಾಡಲಾಗಿರುತ್ತದೆ. ದಿಃ 04.08.2021 ರಂದು ಮು. ಮಾ. ಗಳನ್ನು ರಾಸಾಯನಿಕ ಪ್ರಯೋಗಾಲಯಕ್ಕೆ ಚಾ.ಸಾ. 3ಅವರ ಮೂಲಕ ಕಳುಹಿಸಿಕೊಡಲಾಯಿತು. ದಿ.21.08.2021 ರಂದು RTO ದೇವನಹಳ್ಳಿ ಅವರು ವಾಹನದ ಮಾಲೀಕತ್ವದ ಬಗ್ಗೆ ಬಿ ಎಕ್ಸ್ ಟ್ರಾಕ್ ಪ್ರತಿ ನೀಡಿದ್ದ ಕಡತಕ್ಕೆ ಅಳವಡಿಸಿಕೊಂಡಿರುತ್ತದೆ. ಅದೇ ದಿನ ಆ ವಾಹನ ಮಾಲೀಕರಿಗೆ ಅಂಚೆ ಮೂಲಕ ನೋಟಿಸನ್ನು ಜಾರಿ ಮಾಡಲಾಗಿರುತ್ತದೆ. ಅದೇ ದಿನ ಮು. ಮಾಲು ಯಾವ ಸನ್ನದ್ದುದಾರರರಿಗೆ ಸರಬಾರಾಜು ಆಗಿದೆ ಎಂದು ಮಾಹಿತಿ ಕೋರಿ KSBCL ಡಿಪೋ ತುಮಕೂರುರವರಿಗೆ ಪತ್ರ ವ್ಯವಹಾರ ಮಾಡಲಾಗಿರುತ್ತದೆ. ಅದೇ ದಿ.31.08.2021 ರಂದು KSBCL ಡಿಪೋ ತುಮಕೂರುರವರಿಂದ ವರದಿಯನ್ನು ಪಡೆದುಕೊಂಡಿರುತ್ತೇನೆ. ದಿ.09.09.2021 ರಂದು

ವಾಹನದ ಮಾಲೀಕರ ವಿಳಾಸ ಪತ್ತೆ ಆಗದ ಕಾರಣ ನೋಟಿಸ್ ಹಿಂತಿರುಗಿ ಬಂದಿರುತ್ತದೆ . ದಿ.14.09.2021 ರಂದು ವಾಹನದ ಮಾಲೀಕರ ಪತ್ತೆಗಾಗಿ ಪಿ .ಶಿವರಾಮ್ ಅವರನ್ನು ನೇಮಕ ಮಾಡಿದ್ದು ಅವರು ವಿಚಾರಳದಾರರು ಪತ್ತಆಗಾದ ಕಾರಣ ಮಹಜರ್ ಕ್ರವನು್ನ ಜರುಗಿಸಿ ತಂದು ಹಾಜರು ಪಡಿಸಿರುತ್ತಾರೆ. ದಿ.15.09.2021 ರಂದು FSL ವರದಿಯನ್ನು ಪಡೆದುಕೊಂಡಿರುತ್ತೇನೆ. ಅದೇ ದಿನ ಚಾಸಾ.1 ರಿಂದ 3 ರವರ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.ದಿ.21.09.2021 ರಂದು ಆರೋಪಿ ಸ್ವಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ . ನಂತರ ತನಿಖೆ ಪೂರ್ಣಗೊಳಿಸಿ ಆರೋಪಿ ಹಾಗೂ FSL ವರದಿ ಆಧಾರದ ಮೇಲೆ ಅಂತಿಮ ವರದಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಯಿತು. ಆರೋಪಿ ಮತ್ತು ಮು. ಮಾ. ಗಳನ್ನು ಗುರುತಿಸುತ್ತೇನೆ.

FSL ನೀಡಿದ ಪತ್ರ ನಿ.ಪಿ 5 ಎಂದು ಸಹಿ ನಿ.ಪಿ 5 (ಬಿ) ಎಂದು ಗುರುತಿಸಲಾಯಿತು. FSL ವರದಿಯನ್ನು ನಿ.ಪಿ 6 ಎಂದು ಸಹಿ ನಿ.ಪಿ 6(ಎ) ಎಂದು ಗುರುತಿಸಲಾಯಿತು. RTO ಅವರಿಗೆ ನೀಡಿದ ಪತ್ರವನ್ನು ನಿ.ಪಿ 7 ಎಂದು ಸಹಿ ನಿ.ಪಿ 7(ಎ) ಎಂದು ಗುರುತಿಸಲಾಯಿತು. ಬಿ ಎಕ್ಸಟ್ರಾಕ್ಟ್ ನಿ.ಪಿ 8 ಸಹಿ ನಿ.ಪಿ 8(ಎ) ಎಂದು ಗುರುತಿಸಲಾಯಿತು. KSBCL ಡಿಪೋ ತುಮಕೂರು ರವರಿಗೆ ನೀಡಿದ ಪತ್ರ ನಿ.ಪಿ 9 ಎಂದು ಸಹಿ ನಿ.ಪಿ 9(ಎ) ಎಂದು ಗುರುತಿಸಲಾಯಿತು.KSBCL ಡಿಪೋ ತುಮಕೂರು ಅವರು ನೀಡಿದ ವರದಿ ನಿ.ಪಿ 10 ಎಂದು ಸಹಿ ನಿ.ಪಿ 10(ಎ) ಎಂದು ಗುರುತಿಸಲಾಯಿತು. ಸ್ಥಳ ಪಂಚನಾಮೆ ನಿ.ಪಿ 11 ಎಂದು ಸಹಿ ನಿ.ಪಿ 11(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಆರೋಪಿತಪರಃ Y.R.H ವಕೀಲರಿಂದಃ**

ನಮ್ಮ ಇಲಾಖೆಯಲ್ಲಿ ಅಧಿಕಾರಿಗಳು ಬೇರೆ ಸ್ಥಳಕ್ಕೆ ಹೋದಲ್ಲಿ ಚಲನ ವಲನ ಪುಸ್ತಕದಲ್ಲಿ ನಮೂದು ಮಾಡುತ್ತಾರೆ ಎಂದರೆ ಸರಿ. ಯಾವುದಾದರೂ ಮಾಹಿತಿ ಬಂದಲ್ಲಿ ವಸ್ತು ಸಿಕ್ಕಿದಲ್ಲಿ ಚಲನ ವಲನ ಪುಸ್ತಕದಲ್ಲಿ ನಮೂದು ಮಾಡುತ್ತಾರೆ ಎಂದರೆ ಸರಿ. ಈ ಪ್ರಕರಣಕ್ಕೆ ಸಂಬಂಧಿದಂತೆ ಮಾಹಿತಿ ಚಲನ ವಲನ ಪುಸ್ತಕದಲ್ಲಿ ನಮೂದು ಆಗಿರುತ್ತದೆ ಆದರೆ ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರಲಿಲ್ಲ. ಕಛೇರಿಯಲ್ಲಿದ್ದಾಗ ಯಾವುದೇ ಮಾಹಿತಿ ಬಂದಿರುವುದಿಲ್ಲ. ರಸ್ತೆ ಗಸ್ತಿ ನಲ್ಲಿ ಇದದ್ದ ಮಾಹಿತಿ ಬಂದ ಬಗ್ಗೆ ಚಲನ ವಲನ ಪುಸ್ತಕದಲ್ಲಿ ನಮೂದು ಇರುತ್ತದೆ. ಗಸ್ತು ಮಾಡುತ್ತಿರುವಾಗ ಸಿಕ್ಕ ಮಾಹಿತಿ ಮತ್ತು ಕಛಚೇರಿಯಲ್ಲಿಯಿದ್ದಾಗ ಬಂದ ಮಾಹಿತಿ ಬೇರೆ ಬೇರೆ ಎಂದರೆ ಸರಿ.

ಈ ಪ್ರಕರಣ ಗಸ್ತಿನಲ್ಲಿರುವಾಗ ಬಂದ ಮಾಹಿತಿಯಂತೆ ದಾಖಲಾಗಿರುತ್ತದೆ. ಗಸ್ತಿನ ಮೂಲಕ ಬಂದ ಮಾಹಿತಿಯನ್ನು ಚಾರ್ಜ್ ಶೀಟ್ ನಲ್ಲಿ Through Information ಎಂದು ನಮೂದು ಮಾಡಿರುವುದಿಲ್ಲ. ಯಾವುದೇ ವ್ಯಕ್ತಿ ಅಥವಾ ಸಂಸ್ಥೆಯಿಂದ ನಿವೇದನೆ ಬಂದಿರುವುದಿಲ್ಲ. ಕುಣಿಗಲ್ ತಾಲ್ಲೂಕಿನಲ್ಲಿ ರಾಯಗೊಂಡನಹಳ್ಳಿ ಬರುತ್ತದೆ ಎಂದು ತೋರಿಸಲು ಯಾವುದೇ ದಾಖಲೆ ಹಾಜರು ಪಡಿಸಿಲ್ಲ. ಕುಣಿಗಲ್ ತಾಲ್ಲೂಕಿನಲ್ಲಿ ರಾಯಗೊಂಡನಹಳ್ಳಿ ಗ್ರಾಮ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ತಪ್ಪಾಗಿ ನಮೂದುದಾಗಿರುತ್ತದೆ ಎಂದು ನುತಿಯುತ್ತಾರೆ. ಸದರಿ ಗ್ರಾಮದ ಹೆಸರು FIR, ಪಂಚನಾಮೆ , ಹೇಳಿಕೆಗಳು , ಅಂತಿಮ ವರದಿ ತಪ್ಪಾಗಿ ನಮೂದುದಾಗಿರುತ್ತದೆ . ಈ ಬಗ್ಗೆ ಯಾವುದೇ ಪರಿಶೀಲನೆ ಮಾಡಿಲ್ಲ.

ನಾನು ಈ ಪ್ರಕರಣಕ್ಕೆ ಸಂಬಂಧಿದಂತೆ ರಾಯಗೊಂಡನಹಳ್ಳಿಗೆ ಬೇಟಿ ನೀಡಿಲ್ಲ. ಆರೋಪಿಯ ಅಂಗಡಿ ಮತ್ತು ಮನೆಯ ಬಗ್ಗೆ ಯಾವುದೇ ದಾಖಲಾತಿಯನ್ನು ಅಂತಿಮ ವರದಿಯೊಂದಿಗೆ ಸಲ್ಲಿಸಿಲ್ಲ. ಈ ಪ್ರಕರಣದಲ್ಲಿ ಜಪ್ತು ಆದ ವಾಹನ ಮಾಲೀಕರು ಆರೋಪಿ ಆಗಿರುವುದಿಲ್ಲ ಎಂದರೆ ಸರಿ. ಅವರಿಗೂ ಮತ್ತು ವಾಹನಕ್ಕೂ ಸಂಬಂಧ ಇಲ್ಲ ಎಂದರೆ ಸರಿಯಲ್ಲ . ವಾಹನ ಮಾಲೀಕ ಕುಮಾರ್ ಆಗಿರುತ್ತಾರೆ. ಅವರನ್ನು ಈ ಪ್ರಕರಣದಲ್ಲಿ ಆರೋಪಿಯನ್ನಾಗಿ ಸೇರಿಸಿರುವುದಿಲ್ಲ. ವಾಹನ ಮಾಲೀಕ ಇದ್ದ ಇಲ್ಲವಾ ಅವರ ಊರು ಯಾವುದು ಎಂದು ನನಗೆ ಮಾಹಿತಿ ಇಲ್ಲ. ಪತ್ತೆ ಮಾಡಲು ಕಳುಹಿಸಿದ ವ್ಯಕ್ತಿಯ ಹೆಸರು ಅಂತಮ ವರದಿಯಲ್ಲಿ ನಮೂದು ಮಾಡಿಲ್ಲ.

ಸ್ಥಳ ಪಂಚನಾಮೆಗೆ ಇರುವ ಪಂಚರನ್ನು ಸಾಕ್ಷಿಯನ್ನಾಗಿ ಮಾಡಿರುವುದಿಲ್ಲ. ಅವರಿಗೆ ನೋಟಿಸ್ ಜಾರಿ ಮಾಡಿದ ಬಗ್ಗೆ ದಾಖಲಾತಿಗಳು ಅಂತಿಮ ವರದಿಯೊಂದಿಗೆ ಇರುವುದಿಲ್ಲ. ಮು. ಮಾಲುಗಳನ್ನು FSL ಗೆ ನಾನು ತೆಗೆದಿರುವುದಿಲ್ಲ. ಯಾವ ಯಾವ ಮು. ಮಾಲುಗಳಲ್ಲಿ ಎಷ್ಟು ಮದ್ಯ ಇತ್ತು ಉಳಿದ ಮದ್ಯ ಏನಾಯಿತು ಎಂದು ಅಂತಿಮ ವರದಿ ನಮೂದು ಮಾಡಿಲ್ಲ. ಮು. ಮಾಲುಗಳ ಮೇಲೆ ನನ್ನ ಸಹಿ

ಇರುವುದಿಲ್ಲ. ಮು.ಮಾಲುಗಳನ್ನು FSLಗಳಿಗೆ ನಾನು ತೆಗೆದುಕೊಂಡು ಹೋಗಿಲ್ಲ ಮತ್ತು ವರದಿಗಳನ್ನು ಪಡೆದಿಲ್ಲ ಎಂದರೆ ಸರಿ. ಮುದ್ದೆ ಮಾಲುಗಳನ್ನು FSL ಗೆ ತೆಗೆದುಕೊಂಡು ಹೋಗುವ ಕುರಿತು ನಮ್ಮ ಕಛೇರಿಯಿಂದ ಯಾವುದೇ ಲಿಖಿತ ಆದೇಶವಿಲ್ಲ ಎಂದರೆ ಸರಿ. ನಾನು ಸ್ಥಳಕ್ಕೆ ಹೋಗಿ ನಕ್ಷೆ ತಯಾರು ಮಾಡಿಲ್ಲ. ಅಂಬೇಡ್ಕರ್ ಭವನಕ್ಕೂ ಸ್ಥಳಕ್ಕೂ ಎಷ್ಟು ದೂರ ಇದೆ ನನಗೆ ಗೊತ್ತಿಲ್ಲ. ಗಂಗೊನಗಳ್ಳಿ ರಸ್ತೆಯಿಂದ ಮುಖ್ಯ ರಸ್ತೆ ಎಷ್ಟು ದೂರಯೆಂದು ನನಗೆ ನೆನಪುಯಿಲ್ಲ.

ನನ್ನ ಪ್ರಕಾರ ಘಟನಾ ಸ್ಥಳ ಕೊತ್ತಗೆರೆ SH-33ರಸ್ತೆ ಆಗಿರುತ್ತದೆ. ಘಟನಾ ಸ್ಥಳದಿಂದ ಕೊತ್ತಗೆರೆ ಸರ್ಕಲ್ ಕಾಣುತ್ತಿರಲಿಲ್ಲ. ಮು. ಮಾಲುಗಳನ್ನು ಯಾರು ನನಗೆ ಹಸ್ತಂತರ ಮಾಡಿರುತ್ತಾರೆಂದು ಅಂತಮ ವರದಿಯಲ್ಲಿ ನಮೂದು ಮಾಡಿಲ್ಲ. ಅದೇ ರೀತಿ ಮು . ಮಾಲುಗಳು ಯಾವ ಅಂಗಡಿಗೆ ಸರಬರಾಜು ಆಗಿರುತ್ತವೆಯೆಂದು ನಮ್ಮವರದಿಯಲ್ಲಿ ನಮೂದುಯಿಲ್ಲ. ಮು. ಮಾಲುಗಳ ಮೇಲೆ ಯಾರು ಸಹಿ ಮಾಡಿರುತ್ತಾರೆ ಪೆಟ್ಟಿಗೆ ಮೇಲೆ ಇರುವ ಹೆಸರು ಅಂತಿಮ ವರದಿಯಲ್ಲಿ ಮತ್ತು ಹೇಳಿಕೆಯಲ್ಲಿ ನಮೂದು ಇಲ್ಲ. ಚಾಸಾ.4 ನಮ್ಮ ಮೇಲ್ಮಾಧಿಕಾರಿ ಎಂದರೆ ಸರಿ.ಅವರ ಹೇಳಿಕೆ ಆಧಾರದ ಮೇರೆಗೆ ಅವರು ಹೇಳಿದಂತೆ ನಾನು ಸಹಿಮಾಡಿದ್ದು ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಅಂಶಗಳು ಸುಳ್ಳಿಯಿಂದ ಕೂಡಿದ್ದು ಅಂಕಿ ಸಂಖ್ಯೆಗಳ ಲೆಕ್ಕಕ್ಕಾಗಿ ಸುಳ್ಳು ಪ್ರಕರಣ ದಾಖಲಿಸಿದ್ದೇವೆ ಎಂದರೆ ಸರಿಯಲ್ಲ. ಘಟನಾಸ್ಥಳದ ಅಕ್ಕ ಪಕ್ಕ ಯಾವುದೇ ಮನೆಗಳು ಇಲ್ಲ. ನನಗೆ ಪ್ರಕರಣದ ಬಗ್ಗೆ ಏನು ಮಾಹಿತಿ ಇಲ್ಲ, ಮು. ಮಾಲಿಗೂ ಆರೋಪಿಗೂ ಪ್ರಕರಣಕ್ಕೂ ಯಾವುದೇ ಸಂಬಂಧ ಇಲ್ಲ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಮತ್ತು ಸಾಕ್ಷಿದಾರರ ಹೇಳಿಕೆ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**

**ಸಹಿ/-**

**ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.**

**ಕುಣಿಗಲ್.**